ದಿನಾಂಕ: 28-12-2022
ಸ್ಥಳ: ಮೈಸೂರು

ಗೆ,

ಮಾನ್ಯ ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಕ್ರಾಫರ್ಡ್ ಭವನ
ಮೈಸೂರು - 570005

ಇಂದ,

ಡಾ. ಜೆ. ಲೋಹಿತ್
ಸಂಯೋಜಕರು (ಆಡಳಿತ)
ಆಂತರಿಕ ಗುಣಮಟ್ಟ ಖಾತರಿ ಘಟಕ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – 570006

ಮಾನ್ಯರೆ,

ವಿಷಯ: 'ಸುಶಾಸನ ಮಾಸ'ದ ಅಂಗವಾಗಿ ಅಧಿಕಾರಿಗಳ ಸಭೆಯನ್ನು ಆಯೋಜಿಸುವ ಬಗ್ಗೆ.
ಉಲ್ಲೇಖ: ವಿ.ವಿ. ಆದೇಶ ಸಂಖ್ಯೆ: ಜಿಎಲ್13/137/2022–23, ದಿನಾಂಕ 23-12-2022

ಉಲ್ಲೇಖಿತ ವಿಶ್ವವಿದ್ಯಾನಿಲಯದ ಆದೇಶದನ್ವಯ, 'ಸುಶಾಸನ ಮಾಸ'ದ ಅನುಷ್ಠಾನಕ್ಕಾಗಿ ನನ್ನನ್ನು ನೋಡಲ್ ಅಧಿಕಾರಿಯನ್ನಾಗಿ ನಿಯೋಜಿಸಲಾಗಿರುವುದು ಸರಿಯಷ್ಟೆ. ಸದರಿ ಆದೇಶವು ತಲುಪಿದ ದಿನದಿಂದ (27-12-2022ರ ಪೂರ್ವಾಹ್ನ) ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿರುತ್ತೇನೆಂದು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಐ.ಸಿ.ಡಿ. ವತಿಯಿಂದ ಈಗಾಗಲೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ 'ಸುಶಾಸನ' (Good Governance) ಎಂಬ ಟ್ಯಾಬ್‌ನಡಿ ಹಾಕಲಾಗಿರುವ 'ಕಡ್ಡಾಯ ಪ್ರಕಟಣೆ'ಗಳನ್ನು (Mandatory Disclosures) ಅವಲೋಕಿಸಲಾಗಿ, ಪ್ರಮುಖ ದತ್ತಾಂಶ ಮತ್ತು ದಾಖಲೆಗಳ ಅಲಭ್ಯತೆ ಹಾಗೂ ಏಕರೂಪತೆಯ ಕೊರತೆಯನ್ನು ಗುರುತಿಸಿರುತ್ತೇನೆ. ಈ ನ್ಯೂನತೆಗಳನ್ನು 2022ರ ಡಿಸೆಂಬರ್ 31ರೊಳಗೆ ಸರಿಪಡಿಸಬೇಕಿರುವುದರಿಂದ, ಎಲ್ಲಾ ಶಾಖೆಗಳ ಉಪ ಕುಲಸಚಿವ ಮಟ್ಟದ ಅಧಿಕಾರಿಗಳ ಸಭೆಯನ್ನು ಮೊದಲ ಹಂತದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಆಯೋಜಿಸಬೇಕೆಂದು ತಮ್ಮಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

J. Lohit

(ಡಾ. ಜೆ. ಲೋಹಿತ್)